# ಮೊದಲ ಬೆಳಗಿನ ಮೊದಲು...

ಭಾರತೀಯ ಹಬ್ಬಗಳಲ್ಲಿ ಅತ್ಯಂತ ಪ್ರಮುಖ ಹಬ್ಬವೆಂದರೆ ದೀಪಾವಳಿ, ಹೆಸರೇ ಸೂಚಿಸುವಂತೆ ದೀಪಾವಳಿ ಬೆಳಕಿನ ಹಬ್ಬ. ಮೂರು ದಿನಗಳ ಕಾಲ ವಿಸ್ತರಿಸಿರುವ ಈ ಹಬ್ಬದಲ್ಲಿ ನಾವು ಅಂತರಂಗ, ಬಹಿರಂಗ– ಎರಡೂ ನೆಲೆಗಳಲ್ಲಿ ಬೆಳಕನ್ನು ಆರಾಧಿಸುತ್ತೇವೆ; ಆವಾಹಿಸಿಕೊಳ್ಳುತ್ತೇವೆ; ಕತ್ತಲೆಗೆ ಬೆನ್ನು ಹಾಕಿ, ಬೆಳಕಿನ ಕಡೆ ಮುಖ ಮಾಡಿ ಮುನ್ನಡೆಯುವ ಪ್ರೇರಣೆಯನ್ನು ಪಡೆಯುತ್ತೇವೆ. ಹೀಗೆ ಬೆಳಕನ್ನು ಆರಾಧಿಸುವ ಪ್ರವೃತ್ತಿ ಇಂದು ನಿನ್ನೆಯದೇನಲ್ಲ. ನಮ್ಮಲ್ಲಿ ವೇದೋಪನಿಷತ್ತುಗಳ ಕಾಲದಿಂದಲೂ ಬೆಳಕಿನ ಆರಾಧನೆ ನಡೆಯುತ್ತಲೇ ಬಂದಿದೆ. ಭಾರತೀಯರ ದೃಷ್ಟಿಯಲ್ಲಿ ಬೆಳಕೆಂದರೆ ಜ್ಞಾನ; ಬೆಳಕೆಂದರೆ ಶುಭ; ಬೆಳಕೆಂದರೆ ಪರಿಶುದ್ಧತೆ, ಪ್ರಸನ್ನತೆ; ಬೆಳಕೆಂದರೆ ಅಭಯ, ಬೆಳಕಿನ ಅಭಾವದಲ್ಲಿ ಕಳವಳ, ಅನಿಶ್ಚಿತತೆ, ಭೀತಿ ಇತ್ಯಾದಿಗಳೆಲ್ಲವೂ ಕಾಡತೊಡಗುತ್ತವೆ. ಇಂಥ ತಮೋಭೀತಿಯನ್ನು ದೂರವಿಡುವ ಸಲುವಾಗಿ ಮನುಷ್ಯನ ನಿರಂತರ ಹೋರಾಟ ನಡೆಯುತ್ತಲೇ ಇದೆ. ಮನುಷ್ಯನ ಪಾಲಿಗೆ ರಕ್ಷಕ ಶಕ್ತಿಯಾಗಿರುವ ಬೆಳಕನ್ನೂ ಅದಕ್ಕೆ ಕಾರಣವಾಗಿರುವ ಎಲ್ಲವನ್ನೂ ನಮ್ಮಲ್ಲಿ ಭಗವಂತನ ಅಂಶಗಳೆಂದು ಪೂಜಿಸಲಾಗುತ್ತದೆ. ನಮ್ಮ ಪ್ರಸಿದ್ಧ ಗಾಯತ್ರೀ ಮಂತ್ರವೂ ಬೆಳಕನ್ನೇ ಅರ್ಥಾತ್ ಸೂರ್ಯ ತೇಜಸ್ಸನ್ನೇ ನಮ್ಮೊಳಗೆ ಆವಾಹಿಸಿಕೊಳ್ಳುವ ಪ್ರಾರ್ಥನೆಯಲ್ಲವೆ?

ನಮ್ಮ ಪ್ರಾಚೀನರಂತೂ ಮತ್ತೆ ಮತ್ತೆ ಬೆಳಕಿಗಾಗಿ ಹಂಬಲಿಸಿದವರು, ಅಂಧಕಾರವನ್ನು ನಿವಾರಿಸುವ ಎಲ್ಲ ವಸ್ತು ಸಂಗತಿಗಳನ್ನೂ ಅವರು ದೈವತ್ವಕ್ಕೇರಿಸಿದುದು ಈ ಕಾರಣಕ್ಕಾಗಿಯೇ, ದಿನದ ಆರಂಭದಲ್ಲಿ ಕತ್ತಲನ್ನು ಓಸರಿಸಿ, ಬೆಳಕನ್ನು ಹೊತ್ತು ತರುವ ಉಷಃಕಾಲ ಅವರ ಪಾಲಿಗೆ 'ಉಷಸ್' ಎಂಬ ದೇವತೆ. 'ಪುನಃ ಪುನರ್ಜಾಯಮಾನಾ, ಪುರಾಣೀ, ಸಮಾನಂ ವರ್ಣ ಮಭಿ ಶುಂಭಮಾನಾ...' (ಪುನಃ ಪುನಃ ಹುಟ್ಟುವ ಆಕೆ ಪುರಾತನಳೂ ಹೌದು, ನಿತ್ಯನೂತನಳೂ ಹೌದು. ಅವಳ ವರ್ಣ ವೈಭವ ಮಾಸದೇ ಇರುವಂಥದು) ಎಂದು ಉಷೆಯನ್ನು ವರ್ಣಿಸುವ ಋಷಿಗಳು 'ಆಕೆ ಕತ್ತಲನ್ನು ಓಡಿಸಿ, ಪ್ರಪಂಚದ ಚಟುವಟಿಕೆಗಳಿಗೆ, ಕ್ರಿಯಾಶೀಲತೆಗೆ ಪ್ರೇರಕಳಾಗಿದ್ದಾಳೆ' ಎಂದು ಕೀರ್ತಿಸುತ್ತಾರೆ, ಇಡಿಯ ಜಗತ್ತಿಗೆ ಬೆಳಕನ್ನು ಕೊಡುವ ತೇಜೋಗೋಲವಾದ ಸೂರ್ಯನನ್ನು 'ಜಗತ್ತಿನ ಆತ್ಮ' ಎಂದು ಪರಿಭಾವಿಸುವ ಋಷಿಗಳು ಬೆಳಕಿನ ಜೊತೆಗೆ ಶಾಖವನ್ನು ಒದಗಿಸುವ ಅಗ್ನಿಯನ್ನು 'ವಿಶ್ವಾನಿ ದೇವಾ, ವಯನಾನಿ ವಿದ್ವಾನ್' (ವಿಶ್ವಕ್ಕೆ ಒಡೆಯನಾಗಿರುವ ನೀನು ಮಹಾಜ್ಞಾನಿ) ಎಂದು ಪ್ರಶಂಸಿಸಿದ್ದಾರೆ. ಇವು ನಮ್ಮಲ್ಲಿ ಬೆಳಕಿನ ಆರಾಧನೆ ನಡೆದು ಬಂದ ದಾರಿಯ ಕೆಲವೇ ಕೆಲವು ಹೆಜ್ಜೆ ಗುರುತುಗಳು.

ಋಗ್ವೇದದಲ್ಲಿನ 'ನಾಸದೀಯ ಸೂಕ್ತ'ದಲ್ಲಿ ವೇದಕಾಲೀನ ಋಷಿಗಳು ಬೆಳಕೆಂಬುದರ ಅಸ್ತಿತ್ವವೇ ಇರದ ಒಂದು ನಿಗೂಢ ವಿಲಕ್ಷಣ ಪರಿಸ್ಥಿತಿಯನ್ನು ಊಹಿಸಿಕೊಂಡು, ಅದನ್ನು ಮಾತುಗಳಲ್ಲಿ ಹಿಡಿದಿಡುವ ಸಾಹಸವನ್ನು ಮಾಡಿದ್ದಾರೆ. ಸೂರ್ಯ, ಚಂದ್ರ, ಗ್ರಹ ತಾರೆಗಳು, ಅಗ್ನಿ ಮುಂತಾದ ಯಾವ ಬೆಳಕಿನ ಮೂಲಗಳೂ ಇಲ್ಲದೆ ಗಾಢ ತಮಸ್ಸು ವಿಜೃಂಭಿಸುತ್ತಿದ್ದ ಸೃಷ್ಟಿ ಪೂರ್ವದ ಸ್ಥಿತಿಯನ್ನು ವರ್ಣಿಸುತ್ತದೆ ನಾಸದೀಯ ಸೂಕ್ತ. ಆಗ ನಮ್ಮ ಈ ಜಗತ್ತು ಅಸ್ತಿತ್ವಕ್ಕೆ ಬಂದಿರಲಿಲ್ಲ. ಮೊದಲ ಬೆಳಕಿನ ಕಿರಣಗಳು ಕಾಣಿಸಿಕೊಂಡಿರಲಿಲ್ಲ. ಆಗ ಹಗಲು– ರಾತ್ರಿ, ಭೂಮಿ– ಆಕಾಶ, ಮೃತ್ಯು– ಅಮೃತತ್ವ, ಇತ್ಯಾದಿ ಯಾವ ಯುಗ್ಮಗಳೂ ಇರಲಿಲ್ಲ. ಇದ್ದುದು ಸಾಂದ್ರ ಕತ್ತಲೆ, ನಿಗೂಢ ಮೌನ; ಜೊತೆಗೆ ಎಲ್ಲ ಕಡೆಯೂ ತುಂಬಿ ತುಳುಕುತ್ತಿದ್ದ ಜಲರಾಶಿ! ಅದೊಂದು ನಿರ್ವಾತ, ನಿರ್ವಿಣ್ಣ ಸ್ಥಿತಿ. ಆದರೆ ಯಾವುದೋ ಒಂದು ಚೈತನ್ಯ ಅಲ್ಲಿ ಸುಪ್ತಾವಸ್ಥೆಯಲ್ಲಿತ್ತು. ಕ್ರಮೇಣ ಆ ಚೈತನ್ಯದಲ್ಲಿ 'ಸೃಷ್ಟಿಕಾಮ' ಪುಟಿಯ ತೊಡಗಿತು. ಪರಿಣಾಮವಾಗಿ ಸೃಷ್ಟಿಕ್ರಿಯೆ ಪ್ರಾರಂಭವಾಗಿ, ನಿಧಾನವಾಗಿ ಈ ಜಗತ್ತು ತನ್ನೆಲ್ಲ ವೈವಿಧ್ಯದಿಂದ ರೂಪುಗೊಳ್ಳುವಂತಾಯಿತು. ಜಗತ್ತಿಗೆ ಬೆಳಕನ್ನು ಕೊಡುವ ಸೂರ್ಯ, ಚಂದ್ರ ಗ್ರಹ ನಕ್ಷತ್ರಗಳು ಉದಯಿಸಿ, ಜೀವಿಗಳ ಪಾಲಿಗೆ 'ಕಾಲ'ದ ಅನುಭವವನ್ನು ತಂದುಕೊಡುವಂತಾಯಿತು. ಹೀಗೆ ಸೃಷ್ಟಿಯ ಉಗಮವನ್ನು ಬಣ್ಣಿಸುವ ನಾಸದೀಯ ಸೂಕ್ತದ ದ್ರಷ್ಟಾರ ಋಷಿ ಕೇವಲ ವಿಸ್ಮಯದ ಅಭಿವ್ಯಕ್ತಿಗಷ್ಟೇ ತೃಪ್ತನಾಗುವುದಿಲ್ಲ. ಆತ ಸಂದೇಹವಾದಿಯೂ ಹೌದು. ಸೃಷ್ಟಿಕರ್ತನೆಂಬಾತ ಇದ್ದಾನೆಯೋ, ಇಲ್ಲವೋ? ಈ ವಿಚಿತ್ರವಾದ ಸೃಷ್ಟಿ ಯಾರಿಂದಾಗಿರಬಹುದು?– ಇಂಥ ಹಲವು ಪ್ರಶ್ನೆಗಳನ್ನು ಆತ ನಮ್ಮ ಮುಂದಿರಿಸುತ್ತಾನೆ. ಖಗೋಲ ಶಾಸ್ತ್ರದ ಪ್ರಕಾರ ಸುಮಾರು ಹದಿನೈದು ಶತಕೋಟಿ ವರ್ಷಗಳಷ್ಟು ಹಿಂದೆ ಘಟಿಸಿದ 'ಬಿಗ್ ಬ್ಯಾಂಗ್' ಮಹಾಸ್ಫೋಟದ ಪರಿಣಾಮವೇ ಈ ಜಗತ್ತು. ಪ್ರಾಯಃ ನಾಸವೀಯ ಸೂಕ್ತ ಈ ಸ್ಫೋಟದ ಪೂರ್ವಸ್ಥಿತಿಯನ್ನು ವರ್ಣಿಸುತ್ತಿರುವಂತಿದೆ.

ಅದೇನೇ ಇರಲಿ; ಬೆಳಕನ್ನು ಆರಾಧಿಸುತ್ತಿರುವ ನಾವು ಬೆಳಕೇ ಅಸ್ತಿತ್ವದಲ್ಲಿರದಿದ್ದಂತಹ ಒಂದು ಕರಾಳ ಚಿತ್ರವನ್ನು ಮನಸ್ಸಿಗೆ ತಂದುಕೊಂಡರೆ, ಬೆಳಕಿನ ತಾರಕ ಶಕ್ತಿಯ ಅರಿವು ಇನ್ನಷ್ಟು ಪ್ರಖರವಾದೀತಲ್ಲವೆ?

■ ವೈನತೇಯ

## ಮಾತೇ ಮುತ್ತು

★ ತರ್ಕವು ಕೇವಲ ಬುದ್ಧಿಯ ವಿಷಯ ; ಬುದ್ಧಿಯ ವಿಷಯವನ್ನು, ಹೃದಯ ಒಪ್ಪದಿದ್ದರೆ ಅದನ್ನು ತ್ಯಜಿಸಬೇಕು.

– ಮಹಾತ್ಮ ಗಾಂಧಿ

★ ಮೂರ್ಖರ ಕೈಗೆ ಚಾಕು ಸಿಕ್ಕಿದರೆ ಜನರ ಬೆನ್ನಿಗೆ ಇರಿಯುತ್ತಾರೆ. ಬುದ್ಧಿವಂತರ ಕೈಗೆ ಚಾಕು ಸಿಕ್ಕಿದರೆ ಹಗ್ಗ ಕತ್ತರಿಸಿಕೊಂಡು ಮೂರ್ಖರಿಂದ ಬಿಡುಗಡೆ ಪಡೆಯುತ್ತಾರೆ.

–ಅನಾಮಿಕ

★ ನಿಮ್ಮ ಭೂತಕಾಲದ ಹಿನ್ನೆಲೆಯಲ್ಲಿ ನಿಮ್ಮನ್ನು ಅಳೆಯುವವರು ನಿಮ್ಮ ವರ್ತಮಾನಕ್ಕೆ ಸಂಬಂಧಿಸಿದವರಲ್ಲ.

–ಮ್ಯಾಂಡಿ ಹೇಲ್

★ ಕಿವುಡುತನ ತಪ್ಪೀತೆ ರನ್ನಕುಂಡಲದಿಂದ?
ತೊವಲು ಜಬ್ಬಲು ಬೀಳದೆ ಮೃಷ್ಟಾನ್ನದಿಂದ?
ಭುವಿಯ ಪರಿಣಾಮದಲಿ ಸಿರಿಬಡತನಗಳೊಂದೆ
ಜವರಾಯ ಸಮವರ್ತಿ – ಮಂಕುತಿಮ್ಮ

–ಡಿ.ವಿ.ಗುಂಡಪ್ಪ

★ ಇತರರು ತನ್ನತ್ತ ತೂರಿದ ಇಟ್ಟಿಗೆಗಳಿಂದ ತನ್ನ ಕಟ್ಟಡಕ್ಕೆ ಭದ್ರ ತಳಪಾಯ ಹಾಕುವವನು ಯಶಸ್ವಿ ಮನುಷ್ಯ.

–ಸಿಡ್ನಿ ಗ್ರೀನ್‌ಬರ್ಗ್

★ ಅದೃಷ್ಟವಂತ ಎಂದರೆ ಅವಕಾಶವನ್ನು ಪಡೆಯುವವನು, ಬುದ್ಧಿವಂತ ಎಂದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವವನು, ಪಡೆದ ಅವಕಾಶವನ್ನು ಉಪಯೋಗಿಸಿಕೊಳ್ಳುವವನೇ ಗೆಲ್ಲುವವನು.

–ಸ್ವಾಮಿ ವಿವೇಕಾನಂದ

★ ನಿದ್ದೆಯಲ್ಲಿ ಕಾಣುವಂತದ್ದು ಕನಸಲ್ಲ, ನಿದ್ದೆಗೆಡುವಂತೆ ಮಾಡುವುದಿದೆಯಲ್ಲ ಅದು ನಿಜವಾದ ಕನಸು.

– ಡಾ. ಎ.ಪಿ.ಜೆ. ಅಬ್ದುಲ್ ಕಲಾಂ

★ ಕಾಲವನ್ನು ನಾವು ಪಾಲಿಸಿದರೆ ಅದು ನಮಗೆ ವಿಧೇಯವಾಗಿರುತ್ತದೆ.

–ಸರ್ ಎಂ.ವಿಶ್ವೇಶ್ವರಯ್ಯ

★ ಮಾನವನೆಂದರೆ ಪ್ರಕೃತಿಯಲ್ಲಿಯ ಸಕಲ ಸೋಜಿಗಗಳಲ್ಲಿ ಅತ್ಯಾಶ್ಚರ್ಯಕರವಾದ ಸೋಜಿಗ.

–ಸೋಫೋಕ್ಲಿಸ್

★ ನೀವು ಹೇಗೆ ಇದ್ದೀರೋ ಹಾಗೇ ಇದ್ದೀರಿ ಎಂಬುದನ್ನು ನೀವು ಒಪ್ಪಿಕೊಂಡಾಗ ಸಮಸ್ಯೆ ಎಲ್ಲಿದೆ? ಒಂದು ವಸ್ತು ಹೇಗಿದೆಯೋ ಹಾಗೆ ಅದನ್ನು ನಾವು ಒಪ್ಪಿಕೊಳ್ಳದಿದ್ದಾಗ ಮತ್ತು ಅದನ್ನು ಪರಿವರ್ತಿಸಲು ಬಯಸಿದಾಗ ಮಾತ್ರ ಸಮಸ್ಯೆ ಉದ್ಭವಿಸುತ್ತದೆ.

–ಜಿಡ್ಡು ಕೃಷ್ಣಮೂರ್ತಿ

★ ನಿರಾಸೆ ಮರಣದ ಮತ್ತೊಂದು ಹೆಸರು.

–ಟಾಲ್‌ಸ್ಟಾಯ್

★ ಮನುಷ್ಯನಿಗೆ ಯಾವುದು ಗೊತ್ತಿಲ್ಲವೋ ಅದನ್ನು ತಿಳಿಸುವುದು ವಿದ್ಯಾಭ್ಯಾಸದ ಗುರಿಯಲ್ಲ. ಹೇಗೆ ವರ್ತಿಸಬೇಕೆಂದು ತಿಳಿಸುವುದೇ ವಿದ್ಯಾಭ್ಯಾಸದ ಗುರಿ.

– ಜಾನ್ ರಸ್ಕಿನ್